**V Semester 3 Year LL.B./IX Semester 5 Year B.A. LL.B./B.B.A. LL.B./ IX Semester 5 Year B.A. LL.B. (Maj.-Min. System) Examination, December 2019**

**Opt. IV : INTERPRETATION OF STATUTES AND PRINCIPLES OF LEGISLATION (Old/New)**

Duration : 3 Hours | Max. Marks : 100

**Instructions :** 1. Answer Question No. **9** and **any five** of the remaining questions.

2. Q. No. **9** carries **20** marks and the remaining questions carry **16** marks **each**.

3. Answer should be written in **English** or **Kannada** completely.

Q. No. 1. What is interpretation ? Explain the principle of reading the statute as a whole in its context. Marks : 16

ಅರ್ಥೈಸುವಿಕೆ ಎಂದರೆ ಏನು ? "ಶಾಸನವನ್ನು ಒಟ್ಟಾರೆಯಾಗಿ ಅದರ ಸಾಂದರ್ಭಿಕ ಹಿನ್ನಲೆಯಲ್ಲಿ ಓದಬೇಕು," ಎಂಬ ತತ್ವವನ್ನು ವಿವರಿಸಿ.

Q. No. 2. State the external aids to construction. Explain the importance of parliamentary history as an aid to construction. Marks : 16

ಅರ್ಥೈಸುವಿಕೆಯ ಬಾಹ್ಯ ಸಹಾಯಕ ಅಂಶಗಳನ್ನು ತಿಳಿಸಿ. ಶಾಸನದ ಅರ್ಥೈಸುವಿಕೆಯಲ್ಲಿ ಸಂಸದೀಯ ಇತಿಹಾಸದ ಪ್ರಾಮುಖ್ಯತೆಯನ್ನು ವಿವರಿಸಿ.

Q. No. 3. Explain the rules regarding interpretation of penal and fiscal statutes. Marks : 16

ದಂಡನೀಯ ಹಾಗೂ ತೆರಿಗೆ ಕಾನೂನುಗಳ ಅರ್ಥೈಸುವಿಕೆಗೆ ಸಂಬಂಧಿತ ನಿಯಮಗಳನ್ನು ವಿವರಿಸಿ.

Q. No. 4. Explain the general principles regarding retrospective operation of statutes. Marks : 16

ಶಾಸನಗಳ ಪೂರ್ವಾನ್ವಯಕ್ಕೆ ಸಂಬಂಧಿತ ಮೂಲತತ್ವಗಳನ್ನು ವಿವರಿಸಿ.

Q. No. 5. Explain the general principles regarding statutes affecting jurisdiction of courts. Marks : 16

ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯನ್ನು ಬಾಧಿಸುವ ಶಾಸನಗಳ ಅರ್ಥ ವಿವರಣೆಗೆ ಸಂಬಂಧಿತ ಸಾಮಾನ್ಯ ತತ್ವಗಳನ್ನು ವಿವರಿಸಿ.

Q. No. 6. Analyse critically the importance of utilitarianism as the source of legislation. Marks : 16

'ಉಪಯುಕ್ತತೆ' ಸಿದ್ಧಾಂತವು ಶಾಸನ ನಿರ್ಮಾಣದಲ್ಲಿ ಗಮನಿಸಬೇಕಾದ ಮೂಲ ಅಂಶ ಎಂಬುದನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿರಿ.

P.T.O.

Q. No. 7. Explain the rule of pari materia and reference to other statutes in interpretation of a statute with illustrations. Marks : 16

'ಪ್ಯಾರೀ ಮೆಟೀರಿಯಾ' ನಿಯಮವನ್ನು ವಿವರಿಸಿ ಹಾಗೂ ಒಂದು ಶಾಸನವನ್ನು ಅರ್ಥೈಸುವಲ್ಲಿ ಇತರೆ ಶಾಸನಗಳನ್ನು ಗಮನಿಸಬಹುದಾಗಿದೆ ಎಂಬುದನ್ನು ದೃಷ್ಟಾಂತಗಳೊಂದಿಗೆ ವಿವರಿಸಿ.

Q. No. 8. Write a short note on **any two** of the following : Marks : 2×8=16

ಕೆಳಗಿನ ಯಾವುದಾದರೂ ಎರಡಕ್ಕೆ ಲಘು ಟಿಪ್ಪಣಿ ಬರೆಯಿರಿ :

(a) Casus omissus

(ಕಾಸಸ್ ಒಮಿಸಸ್) ಬಿಟ್ಟು ಹೋದ ಸಂಗತಿಗಳು

(b) Rule of ejusdem generis

(ಎಜುಸ್‌ಡೆಮ್ ಜೆನೆರಿಸ್) ನಿಯಮ ಸಜಾತಿಯ ನಿಯಮ

(c) Mischief rule.

ಕುಚೇಷ್ಟೆ(Mischief) ನಿಯಮ.

Q. No. 9. Solve **any two** of the following problems : Marks : 2×10=20

ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳನ್ನು ಬಿಡಿಸಿ :

(a) S. 418 of the Delhi Municipal Corporation Act, 1957 authorised the officers to raid and impound the cattle abandoned. Petitioner let his cattle unattended on the street, the officer impounded the same. Petitioner argued that the provision enabled the officer to impound only the abandoned cattle, that is to say, ownerless cattle. Municipality contends that it meant impounding of cattle owned and let loose or unattended causing disturbance to public. Decide with reference to applicable rule of interpretation.

ದೆಹಲಿ ಮಹಾನಗರ ಪಾಲಿಕೆ ಅಧಿನಿಯಮ, 1957 , ಕಲಮು 418ರ ಪ್ರಕಾರ ಅಧಿಕಾರಿಗಳು ಕೈ ಬಿಡಲಾದ ದನಕರುಗಳನ್ನು ಬಂಧಿಸಬಹುದಾಗಿದೆ. ವಾದಿಯು ತನ್ನ ದನಗಳನ್ನು ರಸ್ತೆಯಲ್ಲಿ ಯಾವುದೇ ಉಸ್ತುವಾರಿಯಿಲ್ಲದೆ ಬಿಟ್ಟಿರುತ್ತಾನೆ. ಅಧಿಕಾರಿಯು ಆ ಹಸುಗಳನ್ನು ಬಂಧಿಸುತ್ತಾನೆ. ವಾದಿಯು ಕಲಮು 'ಕೈ ಬಿಡಲಾದ' ಅಂದರೆ ಮಾಲಕನಿಲ್ಲದ ದನಕರುಗಳನ್ನು ಬಂಧಿಸುವ ಅಧಿಕಾರವನ್ನು ನೀಡುತ್ತದೆ ಎಂದು ವಾದಿಸುತ್ತಾನೆ. ಮಹಾನಗರ ಪಾಲಿಕೆಯು 'ಕೈ ಬಿಡಲಾದ' ಎಂದರೆ ಅನಿರ್ಬಂಧಿತ ಉಸ್ತುವಾರಿ ಇಲ್ಲದ ಸಾರ್ವಜನಿಕರಿಗೆ ತೊಂದರೆ ನೀಡುವ ದನಕರುಗಳು ಎಂದು ವಾದಿಸುತ್ತದೆ. ಸೂಕ್ತ ಅರ್ಥೈಸುವಿಕೆಯ ನಿಯಮದೊಂದಿಗೆ ನಿರ್ಣಯಿಸಿ.

(b) A statutory provision provides, "Government may appoint as many special judges as may be necessary for any area as for any case or group of cases". Government through an order appointed ten judges for an area, two judges for a case of national importance and three judges to decide a group of special cases. It was argued in challenge that the Government may either appoint judges for an area or for a case or for a group of cases and as such the present order is void. Decide with reasons.

ಒಂದು ಕಾನೂನು ಸರ್ಕಾರವು ಒಂದು ಪ್ರದೇಶಕ್ಕೆ ಎಷ್ಟು ಜನ ನ್ಯಾಯಾಧೀಶರು ಅವಶ್ಯವೋ ಅಷ್ಟು ಅಥವಾ ಒಂದು ಪ್ರತ್ಯೇಕ ಪ್ರಕರಣಕ್ಕೆ ಒಬ್ಬ ನ್ಯಾಯಾಧೀಶ ಅಥವಾ ಕೆಲವು ಪ್ರಕರಣಗಳ ಸಮೂಹಕ್ಕೆ ಓರ್ವ ನ್ಯಾಯಾಧೀಶನನ್ನು ನೇಮಿಸುವಂತೆ ತಿಳಿಸುತ್ತದೆ. ಆದರೆ ತನ್ನ ಒಂದು ಆದೇಶದಲ್ಲಿ ಒಂದು ಪ್ರದೇಶಕ್ಕೆ ಹತ್ತು ಜನ ನ್ಯಾಯಾಧೀಶರನ್ನು, ಇಬ್ಬರು ನ್ಯಾಯಾಧೀಶರನ್ನು ರಾಷ್ಟ್ರೀಯ ಮಹತ್ವ ಹೊಂದಿದ ಒಂದು ಪ್ರಕರಣಕ್ಕೂ ಮತ್ತು ಮೂವರು ನ್ಯಾಯಾಧೀಶರನ್ನು ವಿಶೇಷ ಪ್ರಕರಣಗಳ ಒಂದು ಸಮೂಹಕ್ಕೆ ನೇಮಿಸುತ್ತದೆ. ಈ ಸರ್ಕಾರಿ ಆದೇಶವು ಕಾನೂನು ಬಾಹಿರ ಏಕೆಂದರೆ ಸರ್ಕಾರ ಒಂದು ಪ್ರದೇಶಕ್ಕಾಗಲೀ ಅಥವಾ ಒಂದು ಪ್ರಕರಣಕ್ಕಾಗಲಿ ಅಥವಾ ಕೆಲ ಪ್ರಕರಣಗಳ ಒಂದು ಸಮೂಹಕ್ಕಾಗಲೀ ನ್ಯಾಯಾಧೀಶರನ್ನು ನೇಮಿಸಬಹುದಾಗಿದೆ ಎಂದು ವಾದಿಸಲಾಯಿತು. ಕಾರಣಗಳೊಂದಿಗೆ ನಿರ್ಣಯಿಸಿ.

(c) Petitioner the dealer in betel leaves was assessed to sales tax under the C.P and Berar Sales Tax Act, 1947. According to S.6, items mentioned in II schedule are exempt from tax. Scheduled items included "vegetables" and "betal leaf" but subsequently by amendment "betel leaf" is omitted. It was contended that the betel leaf though omitted is still included in the word "vegetable" and as such not taxable. Decide applying relevant rule of interpretation.

ಅರ್ಜಿದಾರನು ಮಾರಾಟ ತೆರಿಗೆಯಲ್ಲಿ ವೀಳ್ಯದೆಲೆ ಮಾರಾಟಕ್ಕಾಗಿ ತೆರಿಗೆಗೆ ಒಳಪಟ್ಟಿರುತ್ತಾನೆ. C.P ಮತ್ತು ಬೀರಾರ್ ಮಾರಾಟ ತೆರಿಗೆ ಅಧಿನಿಯಮ, 1947 ರ ಕಲಂ 6 ರ ಪ್ರಕಾರ ಎರಡನೇ ಪಟ್ಟಿಯಲ್ಲಿ ನಮೂದಿತ ಅಂಶಗಳು ತೆರಿಗೆಮುಕ್ತ ಪಟ್ಟಿಯಲ್ಲಿ ನಮೂದಿತ ಅಂಶಗಳು 'ತರಕಾರಿಗಳು' ಮತ್ತು 'ವೀಳ್ಯದೆಲೆ'ಯಾಗಿತ್ತು. ಆದರೆ ನಂತರ ತಿದ್ದುಪಡಿಯ ಮೂಲಕ ಈ ಪಟ್ಟಿಯಿಂದ 'ವೀಳ್ಯದೆಲೆ'ಯನ್ನು ಬಿಡಲಾಯಿತು. ಅರ್ಜಿದಾರನು ವೀಳ್ಯದೆಲೆಯನ್ನು ಪಟ್ಟಿಯಿಂದ ಬಿಟ್ಟರೂ ಕೂಡ ಇದು ತರಕಾರಿ ಎಂಬ ಅಂಶದಲ್ಲಿ ಬರುತ್ತದೆ. ಆದ್ದರಿಂದ ತೆರಿಗೆಮುಕ್ತ ಎಂದು ವಾದಿಸುತ್ತಾನೆ. ಸೂಕ್ತ ಅರ್ಥ ವಿವರಣೆಯ ನಿಯಮದೊಂದಿಗೆ ನಿರ್ಣಯಿಸಿ.

---